International Journal of Kannada Research 2020; 6(2): 87-91

International Journal of Kannada Research
www.kannadajournal.com

**ISSN: 2454–5813**
IJKR 2020; 6(2): 87-91
© 2020 IJKR
www.kannadajournal.com
Received: 11-02-2020
Accepted: 15-03-2020

**ಸುವರ್ಣ ಪಾಟೀಲ**
ಸಹಾಯಕ ಪ್ರಾಧ್ಯಾಪಕರು
ಎಸ್.ಕೆ. ಕಲಾ, ವಾಣಿಜ್ಯ ಹಾಗೂ
ವಿಜ್ಞಾನ ಮಹಾವಿದ್ಯಾಲಯ
ತಾಳಿಕೋಟಿ

**Corresponding Author:**
**ಸುವರ್ಣ ಪಾಟೀಲ**
ಸಹಾಯಕ ಪ್ರಾಧ್ಯಾಪಕರು
ಎಸ್.ಕೆ. ಕಲಾ, ವಾಣಿಜ್ಯ ಹಾಗೂ
ವಿಜ್ಞಾನ ಮಹಾವಿದ್ಯಾಲಯ
ತಾಳಿಕೋಟಿ

# ಕಾಯಕ ಜೀವಿಗಳ ಚಳುವಳಿಯಾಗಿ ವಚನ ಚಳುವಳಿ

**ಸುವರ್ಣ ಪಾಟೀಲ**

**ಪ್ರಸ್ತಾವನೆ**

ಸುಮಾರು ಎಂಟುನೂರು ವರ್ಷಗಳ ಹಿಂದೆ ವಿಶ್ವದಲ್ಲಿ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಏಕಕಾಲಕ್ಕೆ ವೈಚಾರಿಕ ಹಾಗೂ ವೈಜ್ಞಾನಿಕ ನೆಲೆಗಟ್ಟಿನಲ್ಲಿ ತೀವ್ರವಾದ ಚಳುವಳಿ ನಡೆದದ್ದು ಭರತಖಂಡದ ಕಾಯಕಯೋಗಿ ಸ್ಥಳವಾದಂತಹ ಕರ್ನಾಟಕದಲ್ಲಿ ಅದುವೇ ಶರಣರ ಮಹಾಸಂಗಮದೊಂದಿಗೆ ಉದಯವಾದದ್ದು. ಹನ್ನೆರಡನೆಯ ಶತಮಾನದಲ್ಲಿ ಧರ್ಮವು ಹದಗೆಟ್ಟಾಗ ಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣದಲ್ಲಿ ಒಂದು ಅಭೂತಪೂರ್ವ ಕ್ರಾಂತಿಯೇ ನಡೆಯಿತು. ಈ ಚಳುವಳಿಯಲ್ಲಿ ಕಮ್ಮಾರ, ಕುಂಬಾರ, ಮಾದಿಗ, ಮಡಿವಾಳ, ಅಂಬಿಗ ಮೊದಲಾದ ದುಡಿಯುವ ವರ್ಗವೇ ತಮ್ಮನ್ನು ತಾವು ತೀವ್ರವಾಗಿ ಈ ಕ್ರಾಂತಿಯಲ್ಲಿ ತೊಡಗಿಸಿಕೊಂಡರು.

ವಚನ ಎಂದರೆ ಸಾಮಾನ್ಯ ಅರ್ಥದಲ್ಲಿ ಮಾತು, ಪ್ರಮಾಣ ಎಂದರ್ಥ. ಆದರೆ ವಚನಕಾರರ ದೃಷ್ಟಿಯಲ್ಲಿ ವಚನ ಬರಿಯ ಮಾತಲ್ಲ. ಅದು ಹೃದಯದ ಮಾತು, ಅಂತರಂಗದ ಅನುಭವದಿಂದ ಒಡಮೂಡಿದ ಅನುಭಾವದ ಮಾತು. ಇದು ಬದುಕಿನ ಸತ್ಯದ ಅನುಭವಗಳ ಆಕರವಾಗಿದ್ದು, ಮಾನವ ಬದುಕಿನ ಸತ್ಯದರ್ಶನವನ್ನು ತೋರಿಸುತ್ತದೆ. ಜೊತೆಗೆ ಸಮಾನತೆಯ ತತ್ವಕ್ಕೆ ಬದ್ಧವಾಗಿದೆ. ವಚನ ಸಾಹಿತ್ಯವು ಜಾತಿ–ಮತ–ಪರಂಪರೆಯಿಂದ ಹೊರಬಂದು ಜಾತ್ಯಾತೀತ ಮನೋಭಾವನೆಯನ್ನು ತಿಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅಂದಿನ ಸಮಾಜದ ಕೆಳಸ್ತರದಿಂದ ಬಂದ ವಚನಕಾರರು ಕಾಯಕದ ಮಹತ್ವವನ್ನು ತಮ್ಮ ವಚನಗಳ ಮೂಲಕ ಸ್ಪಷ್ಟಪಡಿಸಿದರು.

ಕಾಯಕ ಎಂಬುದು ಒಂದು ನೆಲೆಯಲ್ಲಿ 'ವೃತ್ತಿ'ಯೇ ಆದರೂ, 'ಕಾಯಕ' ಎನ್ನುವುದು ಶಿವಶರಣರ ಪ್ರಕಾರ ಕೇವಲ ವೃತ್ತಿ ಅಲ್ಲ; ಅದು ತಾನೊಬ್ಬ 'ಸಾಧಕ' ಎಂಬ ಭಾವದಿಂದ ಕೈಗೊಳ್ಳುವ ವೃತ್ತಿ. ಮೂಲತಃ 'ವೃತ್ತಿ' ಸಮಾಜದಲ್ಲಿ ಅವರವರ ವರ್ಗ–ವರ್ಣಗಳನ್ನು ನಿರ್ಣಯಿಸುವ ಮಾನದಂಡವಾಗಿತ್ತು. ಆದರೆ 'ಕಾಯಕ' ಮಾತ್ರ ಅದರಲ್ಲಿ ತೊಡಗಿದ ಎಲ್ಲರನ್ನು 'ಶರಣ'ರೆಂಬ ಸಮಾನತೆಯ ನೆಲೆಯಲ್ಲಿ ನಿಲ್ಲಿಸುವ ಒಂದು ವಿಧಾನ. ಮೇಲು–ಕೀಳು ಎಂಬುದು ಉದ್ಯೋಗದಲ್ಲಿಲ್ಲ; ಅದನ್ನು ನಿರ್ವಹಿಸುವ ಮನೋಧರ್ಮದಲ್ಲಿದೆ. ದೈಹಿಕ ಶ್ರಮದ ದುಡಿಮೆ ಹಾಗೂ ಅದರ ಫಲವನ್ನು ದಾಸೋಹದ ರೂಪದಲ್ಲಿ ಸಮಾಜದ ಹಿತಕ್ಕಾಗಿ ವಿನಿಯೋಗಿಸುವುದು; 'ಕಾಯಕವೇ ಕೈಲಾಸ' ಸೂತ್ರದನ್ವಯ ಗುರುವಾಗಲೀ, ಜಂಗಮನಾಗಲೀ ಕಾಯಕದಲ್ಲೇ ನಿರತನಾಗಿ ಸಾಧನೆ ಕೈಗೊಳ್ಳಬೇಕು.

ಕಾಯಕವನ್ನು ಕೇಂದ್ರವಸ್ತುವನ್ನಾಗಿಸಿಕೊಂಡು ಅಂತರಂಗ ಹಾಗೂ ಬಹಿರಂಗ ಪರಿಸರವನ್ನು ತಿದ್ದುವ ಸಾಧಕರೂ, ಸುಧಾರಕರೂ ಆಗಿ ಕಾಯಕದ ರಸಾನುಭವಗಳನ್ನು ತಮ್ಮ ವಚನಗಳ ಮೂಲಕ ಬಿತ್ತರಿಸಿದ ಸಾಧಕ ಜೀವನದ ಚಿತ್ರಗಳಾಗಿವೆ.

**ವಿವರಣೆ: ಪ್ರಮುಖ ಕಾಯಕ ವಚನಕಾರರು:**

ಅಂಬಿಗರ ಚೌಡಯ್ಯ, ತುರುಗಾಹಿ ರಾಮಣ್ಣ, ಸುಂಕದ ಬಂಕಣ್ಣ, ಬಹುರೂಪಿ ಚೌಡಯ್ಯ, ಆಯ್ದಕ್ಕಿ ಮಾರಯ್ಯ, ಒಕ್ಕಲಿಗ ಮುದ್ದಣ್ಣ, ಮಾದಾರ ಚನ್ನಯ್ಯ, ಢಕ್ಕೆಯ ಬೊಮ್ಮಣ್ಣ, ವೈದ್ಯ ಸಂಗಣ್ಣ ಇವರೆಲ್ಲರ ಜೀವನದ ಮಾಹಿತಿ ಹಾಗೂ ಕಾಯಕ ವಚನ ವಿಶ್ಲೇಷಣೆ ಮಾಡುವ ಸಂಕ್ಷಿಪ್ತ ಪ್ರಯತ್ನ ಮಾಡಲಾಗಿದೆ.

**ಅಂಬಿಗರ ಚೌಡಯ್ಯ:** ಕ್ರಿ.ಶ. 1160 ರಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಚೌಡದಾನಾಪುರ ಗ್ರಾಮದಲ್ಲಿ ಚೌಡಯ್ಯನವರು ಜನಿಸಿದರು. ವೃತ್ತಿಯಿಂದ ಅಂಬಿಗ, ಪ್ರವೃತ್ತಿಯಿಂದ ಅನುಭಾವಿ. ಕೆಚ್ಚೆದೆಯ ನಿಷ್ಠುರ ಪ್ರಕೃತಿಯ, ಗ್ರಾಮ್ಯ ಮನೋಧರ್ಮದ ವಚನಕಾರ. 'ಅಂಬಿಗರ ಚೌಡಯ್ಯ' ಇವರ ವಚನಾಂಕಿತವಾಗಿದೆ. ಈತನಿಗೆ 'ಪುರವಂತ' ಎಂಬ ಪುತ್ರನಿದ್ದನೆಂದು

ತಿಳಿದುಬರುತ್ತದೆ. ಇವರ ಗುರುಗಳು ಶಿವದೇವಮುನಿ ಮತ್ತು ಉದ್ದಾಲಕ. ತುಂಗಭದ್ರಾ ನದಿಯಲ್ಲಿ ದೋಣಿ ನಡೆಸುವ ಕಾಯಕ ಮಾಡುತ್ತ ಜನರನ್ನು ಒಂದು ದಡದಿಂದ ಇನ್ನೊಂದು ದಡಕ್ಕೆ ಸಾಗಿಸುವ ಕ್ರಿಯೆಯಲ್ಲಿ ವರ್ಣಾಶ್ರಮದವರ ಕಣ್ಣಿಗೆ ಕೆಳ ಜಾತಿಯ ಅಥವಾ ಶೂದ್ರ ವರ್ಗದವನಾಗಿ ಮಾಡುವಂಥ ಕೆಲಸ ಈತನದಾಗಿತ್ತು.

"ತಡೆನೆಲೆಯಿಲ್ಲದ ಮಹಾ ನದಿಯಲ್ಲಿ
ಒಡಲಿಲ್ಲದಂಬಿಗ ಬಂದಿದ್ದೇನೆ
ಹಿಡಿವ ಬಿಡುವ ಮನವ ಬೆಲೆಗೊಟ್ಟರೆ
ಕಡೆ ಹಯಿಸುವೆ ನೀ ಮಹಾ ಹೊಳೆಯ
ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿರಿಸುವನೆಂದಾತ
ಅಂಬಿಗರ ಚೌಡಯ್ಯ"

ಈ ವಚನದಲ್ಲಿ ಕೇವಲ ದೋಣಿ ನಡೆಸುವ ಅಂಬಿಗ ಮಾತ್ರವಲ್ಲದೆ ಚೌಡಯ್ಯನು ಒಡಲಿಲ್ಲದ ಅಂಬಿಗ, ಕಾಸಿನ ಆಸೆಯಿಲ್ಲದ ಅಂಬಿಗ, ತಡೆನೆಲೆಯಿಲ್ಲದ ಮಹಾನದಿಯಲ್ಲಿ ದಾಟಲು ಬರುವವರಿಗೆ 'ಹಿಡಿವ ಬಿಡುವ' ಅಂದರೆ ಹೊಯ್ದಾಡುವಂಥ ತಮ್ಮ ಮನಸ್ಸನ್ನು ಹಾಗೇ ಕೊಟ್ಟರೆ ಈ ಮಹಾಹೊಳೆಯಲ್ಲಿ ಕಡೆಹಾಯಿಸಿ ಅವರನ್ನು 'ನುಡಿಯಿಲ್ಲದ ನಿಸ್ಸೀಮ ಗ್ರಾಮದಲ್ಲಿ' ಇಳಿಸುತ್ತೇನೆ ಎಂದು ನುಡಿಗಟ್ಟಿನ ಸಾಂಕೇತಿಕವಾಗಿ ಶಬ್ದಗಳ ಚಿತ್ತಾರದಲ್ಲಿ ಅವರ ಅನುಭಾವವನ್ನು ಸ್ಪಷ್ಟಪಡಿಸುತ್ತಾರೆ.

**ತುರುಗಾಹಿ ರಾಮಣ್ಣ:** ಬಸವಣ್ಣ, ಅಲ್ಲಮಪ್ರಭುವಿನ ಸಮಕಾಲೀನರಾದ ತುರುಗಾಹಿ ರಾಮಣ್ಣ ಕ್ರಿ.ಶ. 1160ರಲ್ಲಿ ಜೀವಿಸಿದವರು. ಶ್ರೇಷ್ಠ ಜ್ಞಾನಿಯಾಗಿ, ಆಧ್ಯಾತ್ಮದಲ್ಲಿ ಅತಿಯಾದ ಆಸಕ್ತಿ ಹೊಂದಿದವರು. 'ಗೋಪತಿನಾಥ ವಿಶ್ವೇಶ್ವರಲಿಂಗ' ಎಂಬುದು ವಚನಾಂಕಿತವಾಗಿದೆ. ಸುಮಾರು ನಲವತ್ತೈದು ವಚನಗಳು ದೊರೆತಿದ್ದು, ಎಲ್ಲ ವಚನಗಳು ಸತ್ವಯುತವಾಗಿವೆ. ಶಿವಶರಣರ ದನಗಳನ್ನು ಕಾಯುವುದು ಇವರ ಕಾಯಕವಾಗಿತ್ತು. ಸರಳ, ನಿರಾಡಂಬರ ಸುಂದರ ಜೀವನ ನಡೆಸಿದವರು.

"ಕೋಲೊಂದರಲ್ಲಿ ಹಲವು ಕುಲದ ಗೋವುಗಳ ಚಲಿಸದಂತೆ
ನಿಲಿಸುವಂತೆ ಏಕಚಿತ್ತನಾಗಿ ಸರ್ವವಿಕಾರಂಗಳ ಕಟ್ಟುಒಡೆದು
ಇಂದ್ರಿಯಂಗಳ ಇಚ್ಚೆಯಲ್ಲಿ ತ್ರಿವಿಧವ ಹಿಡಿದಿರುವ ಸಂದಿಯಲ್ಲಿ
ನುಸುಳದೆ, ವಸ್ತುವಿನ ಅಂಗದಲ್ಲಿಯೆ ತನ್ನಂಗ ತಲ್ಲೀಯವಾಗಿಪ್ಪುದೆ
ಮಹಾನಿಜದ ನೆಲೆ ಗೋಪತಿನಾಥ ವಿಶ್ವೇಶ್ವರ ಲಿಂಗವನರಿವುದಕ್ಕೆ"

ಹಲವು ಬಣ್ಣ, ಆಕಾರ, ಕುಲಗಳ ಗೋವುಗಳನ್ನು ನಿಯಂತ್ರಿಸುವ ಕೋಲು ಒಂದೇ ಆಗಿದೆ. ಅದೇ ರೀತಿ ಮಾನವನ ಮನಸ್ಸಿನ ಸರ್ವವಿಕಾರಗಳನ್ನು ನಿಯಂತ್ರಿಸುವ ಕೋಲೆಂದರೆ-ಮನಸ್ಸು ಎಂದಿದ್ದಾರೆ. ಮೇಯಲು ಅಡವಿಗೆ ಕರೆದೊಯ್ಯುವ ಹಸುಗಳು ಹಸಿರು ಕಂಡತ್ತ ಹೋಗುವುದು ಅವುಗಳ ಸಹಜ ಸ್ವಭಾವ. ಅವುಗಳನ್ನು ಬೇಕಾದ ಕಡೆ ನಿಲ್ಲಿಸುವ ಮತ್ತು ಸರಿಯಾದ ದಾರಿಯಲ್ಲಿ ನಡೆಸುವುದು ತುರುಗಾಹಿಯ ಕೈಯಲ್ಲಿರುವ ಕೋಲು. ಅದರಂತೆ ಇಂದ್ರಿಯಗಳ ಇಚ್ಛೆಯಂತೆ ಸಂದಿಯಲ್ಲಿ ನುಸುಳುವ ಮಾನವನನ್ನು ತನ್ನ ಅಂತರಂಗದಲ್ಲೇ ಲೀನವಾಗಿರುವ ಸೂಕ್ತ ಮನಸ್ಸನ್ನು ಜಾಗೃತಗೊಳಿಸಿಕೊಂಡು ಶಿವಯೋಗವನ್ನು ಸಾಧಿಸುವುದು ನಿಜವಾದ ನೆಲೆ. ಇಂದ್ರಿಯಗಳ ಇಚ್ಛೆಯಂತೆ ಕುಣಿಯುವವರ ಸಂಗಸಲ್ಲದು, ಮನದ ವಿಕಾರಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದೇ ವಿಶ್ವೇಶ್ವರಲಿಂಗವನ್ನು ಅರಿಯುವುದಕ್ಕಿರುವ ದಾರಿ ಎಂದಿದ್ದಾರೆ. ಜೊತೆಗೆ ಸರ್ವೇಂದ್ರಿಯಗಳನ್ನು ಕಾಯುವ ಅಂತರಂಗದ ಸಾಧನೆಗೆ ರೂಪಕವಾಗಿ ಈ ವಚನ ನಿಲ್ಲುತ್ತದೆ.

**ಸುಂಕದ ಬಂಕಣ್ಣ:** ಈತನ ಕಾಲ ಕ್ರಿ.ಶ. 1160. ಸುಂಕ (ತೆರಿಗೆ) ಸಂಗ್ರಹಿಸುವ ಕಾಯಕ ಮಾಡುತ್ತಿದ್ದನು. 'ಬಂಕೇಶ್ವರ ಲಿಂಗ' ಅಂಕಿತನಾಮದಲ್ಲಿ 108 ವಚನಗಳು ದೊರೆತಿವೆ. ಈ ವಚನಗಳು ಗಾತ್ರದಲ್ಲಿ ಚಿಕ್ಕದಾದರೂ ಸರಳವಾಗಿವೆ. ಕೆಲವು ಬೆಡಗಿನ ವಚನಗಳು ಆಗಿವೆ. ವ್ಯಾಪಾರ ಪದ್ಧತಿ, ಸುಂಕ ಪದ್ಧತಿ, ಸರಕು ಸಾಗಾಣಿಕೆಯ ಸಾಧನಗಳನ್ನು ಕುರಿತ ವಿವರಗಳನ್ನೊಳಗೊಂಡ ವಚನಗಳು ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವವೆನಿಸಿವೆ.

"ಎಲ್ಲರ ಸುಂಕ, ಎತ್ತು ತೊತ್ತು ಬಂಡಿ ಬಲ್ಲೆತ್ತು
ಎನ್ನ ಸುಂಕ ಎಲ್ಲರ ಪರಿಯಲ್ಲ
ಕಟ್ಟಿದ ಕುರುಹಿಂಗೆ ಹಿಡಿದ ವ್ರತನೇಮ ನಿತ್ಯಕ್ಕೆ
ತಪ್ಪಲಿಲ್ಲಯೆಂದು ಕೊಟ್ಟ ಚೀಟಿ ಸಿಕ್ಕಿಸಿದೆ
ನಿಮ್ಮಂಗದಲ್ಲಿ ಭಕ್ತರಾಗಿ ಕಳುವುಹಾದರ
ಮಿಕ್ಕಾದೊಂದು ಬೇಡ ಎಂದು ಕೊಟ್ಟ ಚೀಟುವಿಶುದ್ಧಿ
ಜಗದ ಸುಂಕದೊಡೆಯ ಬಂಕೇಶ್ವರ ಲಿಂಗನು"

ದಿನವೂ ಮಾರಾಟಕ್ಕೆ ಬರುವ ಸರಕುಗಳ ಮೇಲೆ ಸುಂಕ ವಸೂಲಿ ಮಾಡುವುದು ವೃತ್ತಿಯಾದರೂ ನಮ್ಮ ಜೀವನವೇ ಒಂದು ವ್ಯವಹಾರ; ಜನ್ಮದಿಂದ ಜನ್ಮಕ್ಕೆ ಶರೀರವನ್ನು ಹೊತ್ತುಬರುತ್ತೇವೆ; ಜಗದೊಡೆಯನಿಗೆ ನಾವು ಸುಂಕಕೊಟ್ಟು ಚೀಟಿ ಪಡೆಯದೆ ತಪ್ಪಿಸಿಕೊಳ್ಳುವಂತಿಲ್ಲ. ನಮ್ಮ ಸುಖ-ದುಃಖಗಳು ನಾವು ಕೊಡುವ ಸುಂಕ ಎಂದು ಹೇಳುತ್ತಾನೆ. ಪರಮಾತ್ಮನಿಗೆ ಸುಂಕವನ್ನು ನೀಡದೆ ಹೋದರೆ ಭವಬಂಧನದಿಂದ ಬಿಡುಗಡೆ ಸಾಧ್ಯವಿಲ್ಲ ಎನ್ನುವಲ್ಲಿ ವೈರಾಗ್ಯಕ್ಕಿಂತಲೂ ಶುದ್ಧ ಜೀವನದ ಪರಿಕಲ್ಪನೆ ಎದ್ದು ಕಾಣುವುದು. ಇಲ್ಲಿ ಸುಂಕದ ಬಂಕಣ್ಣನಿಗೆ ಒಟ್ಟು ಬದುಕೆಂಬುದು ಭಕ್ತಿರೂಪದ ಸುಂಕ. ಆತನು ಇದನ್ನು ಬಂಕೇಶ್ವರ ಲಿಂಗಕ್ಕೆ ಅರ್ಪಿಸುತ್ತಾನೆ.

**ಬಹುರೂಪಿ ಚೌಡಯ್ಯ:** ಜನವಶ್ಯ ಅಥವಾ (ಜನಸೇವ್ಯ) ಮತ್ತು ಧರ್ಮವತಿ ಎಂಬ ಬ್ರಾಹ್ಮಣ ದಂಪತಿಗಳ ಮಗನಾಗಿ ಕ್ರಿ.ಶ. 1160ರಲ್ಲಿ ಬೀದರ ಜಿಲ್ಲೆಯ ರೇಕಳಿಕೆ ಎಂಬಲ್ಲಿ ಜನಿಸಿದವನು ಚೌಡಯ್ಯ. ಈತನ ದೀಕ್ಷಾಗುರು ರೇಕನಾಥ ಮತ್ತು ಜ್ಞಾನಗುರು ನಾಗಿನಾಥ. ಇವರಿಬ್ಬರ ನೆನಪಿಗೋಸ್ಕರ 'ರೇಕಣ್ಣಪ್ರಿಯ ನಾಗಿನಾಥ' ಎಂಬ ವಚನಾಂಕಿತ ಇಟ್ಟುಕೊಂಡಿದ್ದಾನೆ. ಜನಪದ ಕಲಾವಿದನಾಗಿ ಬಹುರೂಪಿ ಕಾಯಕದ ಮೂಲಕ ಶರಣ ಬದುಕನ್ನು ನಡೆಸುತ್ತಾನೆ. ನಿಪುಣ ನಟ, ನಗೆಗಾರನಾಗಿದ್ದರ ಜೊತೆಗೆ ಉತ್ತಮ ವಚನಕಾರನೂ ಹೌದು. ಒಟ್ಟು ಅರವತ್ತಾರು ವಚನಗಳು ದೊರೆತಿವೆ. ಚೌಡಯ್ಯನು ವಿಭಿನ್ನ ವೇಷಭೂಷಣ ಮತ್ತು ಪಾತ್ರಾಭಿನಯದ ಮೂಲಕ ಜನರನ್ನು ರಂಜಿಸುವುದು ಪೂರ್ವಜರಿಂದ ಬಂದ ಬಳುವಳಿಯಾಗಿದೆ. ಹಾಸ್ಯ, ಶೃಂಗಾರ ವಿಡಂಬನೆ ಮತ್ತು ಟೀಕೆಗಳ ಅಭಿನಯ ಮಾಡುವ ಮೂಲಕ ಜನರನ್ನು ಎಚ್ಚರಿಸುವ ದಿಟ್ಟ ಗಣಾಚಾರ ಕಾಯಕ ಮಾಡುತ್ತಿದ್ದನು. ಕಾವ್ಯ, ಪುರಾಣ, ಜನಪದ ಹಾಡುಗಳಲ್ಲಿ ಈತನ ಕಥೆ ಪ್ರಸಿದ್ಧವಾಗಿದೆ.

"ಅಲ್ಲಿಯ ಬಹುರೂಪ ಇಲ್ಲಿಗೆ ಬಂದಿತ್ತು
ಇಲ್ಲಿಯ ಬಹುರೂಪ ಎಲ್ಲಿ ಅಡಗಿತ್ತೊ?
ಎನ್ನ ಬಹುರೂಪ ಬಲ್ಲವರಾರು?
ನಾದ ಹರಿದು ಸ್ವರವು ಸೂಸಿದ ಬಳಿಕ

ಈ ಬಹುರೂಪ ಬಲ್ಲವರಾರು?
ರೇಕಣ್ಣಪ್ರಿಯ ನಾಗಿನಾಥನಲ್ಲಿ
ಬಸವಣ್ಣನಿಂದ ಬದುಕಿತೀ ಲೋಕವೆಲ್ಲ"

ರೇಕಳಿಕೆ ಗ್ರಾಮದ ಬಹುರೂಪಿ ಚೌಡಯ್ಯನ ಕುಲಕಸುಬು ಬಹುರೂಪದ ಪಾತ್ರ ಮಾಡಿ, ಹೊಟ್ಟೆ ತುಂಬಿಸಿಕೊಳ್ಳುವ ಜಾನಪದ ಕಲೆಯ ವೃತ್ತಿ. ಇದನ್ನು ಕುರಿತು ಅತ್ಯಂತ ಸೂಕ್ಷ್ಮವಾಗಿ 'ಅಲ್ಲಿಯ ಬಹುರೂಪ ಇಲ್ಲಿಗೆ ಬಂದಿತ್ತು' ಅಂದರೆ ಅವರ ಪೂರ್ವಾಶ್ರಮದ ಕುಲಕಸುಬು ಅವರೊಂದಿಗೆ ಕಲ್ಯಾಣಕ್ಕೆ ಬಂದಿತ್ತು. ಕಲ್ಯಾಣಕ್ಕೆ ಬಂದ ಮೇಲೆ ಕಾಯಕದ ಜೊತೆಗೆ ಅನುಭಾವ, ದಾಸೋಹಗಳು ಬೆರೆತುಕೊಂಡವು. ಇಲ್ಲಿನ ಬಹುರೂಪತನವು ಎತ್ತ ಹೋಯಿತು ಎಂಬ ಅರಿವಿಲ್ಲ ಎನ್ನುತ್ತಾರೆ. ಇನ್ನೂ ತಾನು ವ್ಯಕ್ತಿಗತವಾಗಿ ಮಾಡಿದ ಕ್ರಿಯೆಯ ಬಹುರೂಪದ ಲೆಕ್ಕ ಬಲ್ಲವರಾರು ಎಂದು ತಮ್ಮನ್ನು ಪ್ರಶ್ನಿಸಿಕೊಳ್ಳುವ ಅಭಿಲಾಷೆ ಚೌಡಯ್ಯನವರದು. 'ನಾದ ಹರಿದು ಸ್ವರವು ಸೂಸಿದ ಬಳಿಕ' ಅಂದರೆ ಮನುಷ್ಯನು ಅಸ್ತಂಗತನಾದ ಮೇಲೆ, ತೀರಿಕೊಂಡ ಮೇಲೆ ಆತನ ಬಹುರೂಪತನವನ್ನು ಯಾರು ಅಳೆಯುವರು. ನಾದಬಿಂದು ಕಲಾತೀತವಾದ ಈ ಜಗತ್ತು ಬಸವಣ್ಣನಿಂದ ಬದುಕುತ್ತದೆ. ಅವರು ತೋರಿಸಿದ ಬದುಕಿನ ಸರಳ ಮಾರ್ಗಗಳು ಈ ಲೋಕವನ್ನು ಬೆಳಗಿಸುತ್ತದೆಂಬ ಭಕ್ತಿಗೌರವಗಳು ಮೇಲಿನ ವಚನದಲ್ಲಿ ಕಾಣಸಿಗುತ್ತವೆ.

**ಆಯ್ದಕ್ಕಿ ಮಾರಯ್ಯ:** ಕ್ರಿ.ಶ. 1160ರಲ್ಲಿ ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಅಮರೇಶ್ವರ ಗ್ರಾಮದಲ್ಲಿ ಮಾರಯ್ಯ ಜನಿಸಿದ. ಬಸವಣ್ಣನವರ ಮನೆಯ ಮುಂದೆ ಚಲ್ಲಿದ ಅಕ್ಕಿಯನ್ನು ಆಯುವುದು ಈತನ ಕಾಯಕವಾಗಿತ್ತು. ಆದುದರಿಂದಲೇ 'ಆಯ್ದಕ್ಕಿ ಮಾರಯ್ಯ' ಎಂಬ ಹೆಸರು ಬಂದಿತು. ಈತನ ಪತ್ನಿ 'ಲಕ್ಕಮ್ಮ' ಈಕೆಯೂ ಸತ್ಯಶುದ್ಧ ಕಾಯಕದಲ್ಲಿ ಪತಿಗೆ ನೆರವಾಗಿ ನಿಂತಳು. ಈ ದಲಿತ ಶರಣ ದಂಪತಿಗಳು ಬಸವಣ್ಣನವರ ಸಿದ್ಧಾಂತಕ್ಕೆ ಪ್ರಭಾವಿತರಾಗಿ ಕಲ್ಯಾಣಕ್ಕೆ ಬಂದರೆಂದು ಹೇಳಲಾಗುತ್ತದೆ. ಮಾರಯ್ಯನ ಮೂವತ್ತೊಂದು ವಚನಗಳು ನಮಗೆ ಲಭ್ಯವಾಗಿದ್ದು 'ಅಮರೇಶ್ವರಲಿಂಗ' ಎಂಬ ಅಂಕಿತವನ್ನು ಹೊಂದಿದೆ. ಸತ್ಯ-ಶುದ್ಧ ಕಾಯಕವೇ ಇವರ ಜೀವನದ ಧ್ಯೇಯವಾಗಿತ್ತು.

"ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದಡೂ ಮರೆಯಬೇಕು ಲಿಂಗಪೂಜೆಯಾದಡೂ ಮರೆಯಬೇಕು ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು"

ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣರ ನಿಲುವಿನಲ್ಲಿ 'ಕಾಯಕ' ಎಂದರೆ ವ್ಯಕ್ತಿಯು ಮಾಡುವ ಕಸುಬು ಎಂದರ್ಥ. ಇದು ಅವನ ಕುಟುಂಬ ಮತ್ತು ಸಮಾಜಕ್ಕೆ ಒಳಿತನ್ನುಂಟು ಮಾಡುವ ದುಡಿಮೆ. ಕಾಯಕದಲ್ಲಿ ಮಗ್ನನಾದವನು ಗುರುದರ್ಶನವಾದದೂ ಮರೆಯಬೇಕು. ಅಂದರೆ ದುಡಿಮೆಯ ಸಮಯದಲ್ಲಿ ಗುರು ತನ್ನ ಬಳಿ ಬಂದರೂ ದುಡಿಮೆ ಮಾಡುವುದನ್ನು ಬಿಟ್ಟು ಗುರುವನ್ನು ಉಪಚರಿಸಲು ಹೋಗಬಾರದು. ಏಕೆಂದರೆ ಗುರು ಸೇವೆಗಿಂತಲೂ ಕಾಯಕ ದೊಡ್ಡದು. ಜೊತೆಗೆ ಲಿಂಗಪೂಜೆಗಿಂತಲೂ ದುಡಿಮೆಯೇ ಶ್ರೇಷ್ಠವಾಗಿ ನಿಲ್ಲುವುದು. ಜಂಗಮನು ತನ್ನ ಬಳಿ ಬಂದು ನಿಂತಿದ್ದರೂ ಅವನೊಡನೆ ಯಾವುದೇ ಮಾತುಕತೆಯನ್ನಾಡದೆ ಅವನತ್ತ ಗಮನ ಹರಿಸದೆ, ವ್ಯಕ್ತಿಯು ತಾನು ಮಾಡುತ್ತಿರುವ ಕೆಲಸದಲ್ಲಿ ತೊಡಗಿರಬೇಕು. 'ಕಾಯಕವೇ ಕೈಲಾಸ' ಅಂದಂದಿನ ಕಾಯಕ ಅಂದಂದೆ ಪ್ರಾಮಾಣಿಕತೆಯಿಂದ ಮಾಡುತ್ತಾ ಬಂದರೆ ಒಳಿತನ್ನೇ ಕಾಣುವುದು ಅಮರೇಶ್ವರಲಿಂಗದ ಪೂಜೆಯಾಗಿದ್ದರೂ ಅದು ಕೂಡ ಮಾಡುವ ಕಾಯಕದಲ್ಲಿಯೇ ಸೇರಿಕೊಂಡಿದೆ ಎಂಬ ನಿಲುವು ಹೊಂದಿದವನು ಆಯ್ದಕ್ಕಿ ಮಾರಯ್ಯ.

**ಒಕ್ಕಲಿಗ ಮುದ್ದಣ್ಣ:** ಈತನ ಕಾಲ ಕ್ರಿ.ಶ. 1160. ಜೋಳದಹಾಳ ಎಂಬ ಗ್ರಾಮದವನು. ಬೇಸಾಯ ವೃತ್ತಿಯನ್ನು ಕೈಕೊಂಡು ಬದುಕು ಸಾಗಿಸಿದವನು. ಜಂಗಮ ದಾಸೋಹ ನಡೆಸುವುದು ನಿತ್ಯ ವ್ರತವಾಗಿತ್ತು. ರಾಜನು ಕೇಳಿದ ಹೆಚ್ಚಿನ ತೆರಿಗೆಯನ್ನು ಕೊಡದೆ ಆ ಹಣವನ್ನು ಜಂಗಮ ದಾಸೋಹಕ್ಕಾಗಿ ವಿನಿಯೋಗಿಸುತ್ತಿದ್ದನು. ಮುದ್ದಣ್ಣ ಒಬ್ಬ ಕೃಷಿ ಪಂಡಿತ; ಜೊತೆಗೆ ಆಧ್ಯಾತ್ಮ ಕೃಷಿಕ. 'ಕಾಮಭೀಮ ಜೀವಧನದೊಡೆಯ' ಎಂಬ ಅಂಕಿತದಲ್ಲಿ 12 ವಚನಗಳು ದೊರೆತಿವೆ. ಬೇಸಾಯದ ಪರಿಭಾಷೆಯಲ್ಲಿ ಆಧ್ಯಾತ್ಮಿಕ ವಿಷಯಗಳನ್ನು ಪ್ರಸ್ತಾಪಿಸಿದವನು.

"ಭಕ್ತಿಯೆಂಬ ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲಂ ಪಿಡಿದು
ಅಂತಃಕರಣ ಚತುಷ್ಟಯವೆಂಬ ಪಶುವಂ ಕಟ್ಟಿ
ಓಂಕಾರನಾದವೆಂಬ ಸೆಳೆಕೋಲಂ ಪಿಡಿದು
ಉತ್ತರ ಕ್ರೀಯೆಂಬ ಸಾಲನೆತ್ತಿ ದುಃಕರ್ಮವೆಂಬ ಕಂಟಕದ ಗುಲ್ಮವಂ
ಕಡಿದು ಅರುಹೆಂಬ ರವಿಯ ಕಿರಣದಿಂದ ಒಣಗಿಸಿ
ಆವಂ ಕೂಡಲೊಟ್ಟು, ಜ್ಞಾನಾಗ್ನಿಯೆಂಬ ಅಗ್ನಿಯಿಂದ ಸುಟ್ಟುರುಹಿಆ
ಹೊಲನಂ ಹಸಮಾಡಿ, ಬಿತ್ತುವ ಪರಿ ಇನ್ನಾವುದಯ್ಯಾ ಎಂದಡೆ...."

ಒಂದು ಕಡೆ ಬಹಿರಂಗ ಬೇಸಾಯ, ಇನ್ನೊಂದು ಕಡೆ ಅಂತರಂಗ ಕೃಷಿ. ಈ ಎರಡರ ನಿಕಟ ಅನುಭವವುಳ್ಳ ಮುದ್ದಣ್ಣ ತನ್ನ ವೃತ್ತಿಯ ಪದಗಳು ಹಾಗೂ ರೂಪಕಗಳನ್ನೇ ಬಳಸಿ ಬಹಳ ಗಡುಚಾದ ವಿಚಾರಗಳನ್ನು ಮನಮುಟ್ಟುವಂತೆ ಈ ವಚನದಲ್ಲಿ ನಿರೂಪಿಸುತ್ತಾನೆ. ಭಕ್ತಿಯೆನ್ನುವ ಭೂಮಿಯಲ್ಲಿ ಗುರುವಿನ ಉಪದೇಶವೆಂಬ ನೇಗಿಲನ್ನು ಹಿಡಿದು ಮನ ಬುದ್ಧಿಯ ಚಿತ್ತ ಅಹಂಕಾರವೆಂಬ ಅಂತಃಕರಣ ಚತುಷ್ಟಯವೆನ್ನುವ ಪಶುಗಳನ್ನು ಹೂಡಿ ಓಂಕಾರವೆನ್ನುವ ಚಾವಟಿ ಹಿಡಿದು ಉತ್ತರ ಕ್ರೀಯೆಂಬ ಸಾಲನ್ನು ಹಿಡಿದು ದುಷ್ಕರ್ಮವೆನ್ನುವ ಮುಳ್ಳು ಪೊದೆಯನ್ನು ಕಡಿದು, ಜ್ಞಾನವೆಂಬ ಸೂರ್ಯಕಿರಣದಿಂದ ಒಣಗಿಸಿ ಗುಡ್ಡೆಹಾಕಿ ಜ್ಞಾನಾಗ್ನಿಯಿಂದ ಸುಟ್ಟು ಆ ಹೊಲವನ್ನು ಹಸನುಗೆಯ್ದು ಬೀಜವನ್ನು ಬಿತ್ತುವ ಪರಿ ಯಾವುದು? ಎನ್ನುತ್ತಾ ಶಿವಕಾರುಣ್ಯಕ್ಕೆ ಪಾತ್ರನಾದವನು ಮುದ್ದಣ್ಣ.

**ಮಾದಾರ ಚೆನ್ನಯ್ಯ:** ಹನ್ನೆರಡನೆಯ ಶತಮಾನದ ಶಿವಶರಣ ಹಾಗೂ ವಚನಕಾರ. ಜಾತಿಯಿಂದ ಮಾದಾರ. ಆದರೆ ಆಚಾರ-ವಿಚಾರಗಳಿಂದ ಶಿವಭಕ್ತ 'ನಿಜಾತ್ಮಾರಾಮ ರಾಮನಾ' ಎಂಬ ಅಂಕಿತದಲ್ಲಿ 10 ವಚನಗಳು ದೊರೆತಿವೆ. ಇವುಗಳಲ್ಲಿ ವೀರಶೈವ ತತ್ತ್ವ ಬೋಧನೆ ಕಂಡುಬರುವುದು. ತಮಿಳುನಾಡಿನ ಕರಿಕಾಲ ಚೋಳರಾಜನ ಕುದುರೆ ಲಾಯದಲ್ಲಿ ಕೆಲಸಕ್ಕಿದ್ದನು. ಹುಲ್ಲು ಕೊಯ್ಯುವುದು ಈತನ ಕಾಯಕವಾಗಿತ್ತು. ಅನಂತರ ಬಸವಾದಿ ಶರಣರ ಆಚಾರ-ವಿಚಾರಗಳಿಂದ ಪ್ರಭಾವಿತನಾಗಿ ಕಲ್ಯಾಣಕ್ಕೆ ಬಂದನು. ಅಲ್ಲಿ ತನ್ನ ಕುಲದ ಕಾಯಕವಾದ ಚರ್ಮಗಾರಿಕೆಯನ್ನು ಮುಂದುವರೆಸಿದನು. ದೇವನಿಗೆ ಅಂಬಲಿ ಉಣಿಸಿದ ಪ್ರಸಂಗ ಅವನ ಉಜ್ವಲ ಭಕ್ತಿಗೆ ಉದಾಹರಣೆಯಾಗಿದೆ. ಬಸವಣ್ಣನವರು ಚೆನ್ನಯ್ಯನನ್ನು ಕುರಿತು-"ನಡೆಚೆನ್ನ-ನುಡಿಚೆನ್ನ, ಪ್ರಥಮರೊಳಗೆ ಚೆನ್ನ, ಪುರಾತರೊಳಗೆ ಚೆನ್ನ ಸವಿ ನೋಡಿ ಅಂಬಲಿ ರುಚಿಯಾಯಿತೆಂದು ಕೂಡಲ ಸಂಗಮದೇವನಿಗೆ ಬೇಕೆಂದು ಕೈದೆಗೆದ ನಮ್ಮ ಮಾದಾರ ಚೆನ್ನಯ್ಯ" ಎಂದು

ಹೃದಯಾಂತರಾಳದಿಂದ ಸ್ತುತಿಸಿದ್ದಾರೆ.

"ನಡೆ ನುಡಿ ಸಿದ್ಧಾಂತವಾದಲ್ಲಿ ಕುಲಹೊಲೆ ಸೂತಕವಿಲ್ಲ
ನುಡಿ ಲೇಸು, ನಡೆಯಧಮವಾದಲ್ಲಿ
ಅದು ಬಿಡುಗಡೆಯಿಲ್ಲದ ಹೊಲೆ
ಕಳಹು ಪಾರದ್ವಾರಂಗಳಲ್ಲಿ ಹೊಲಬನರಿಯದೆ
ಕೆಟ್ಟು ನಡೆವುತ್ತ ಮತ್ತೆ ಕುಲಜರೆಂಬ ಒಲವರುಂಟೆ?
ಆಚಾರವೆ ಕುಲ, ಅನಾಚಾರವೆ ಹೊಲೆ
ಇಂತೀ ಉಭಯವ ತಿಳಿದರಿಯ ಬೇಕು
ಕೈಯುಳಿಗತ್ತಿ ಅಡಿಗೂಂಟಕ್ಕಡಿಯಾಗಬೇಡ
ಅರಿ ನಿಜಾತ್ಮಾರಾಮ ರಾಮನಾ"

ಮಾದಾರ ಚೆನ್ನಯ್ಯನ ವಚನಗಳಲ್ಲಿ 'ಕುಲ' ಕೇಂದ್ರವಾಗಿದೆ. ಬದುಕಿನಲ್ಲಿ ಆಡುವುದೊಂದು, ಮಾಡುವುದೊಂದು ಆಗಬಾರದು. ನಡೆ–ನುಡಿಗಳೊಂದಾದಾಗ ಜೀವನ ಸಾರ್ಥಕ. ಏಕೆಂದರೆ ಶರಣರ ದೃಷ್ಟಿಯಲ್ಲಿ ಆಚಾರವೇ ಕುಲ, ಅನಾಚಾರವೆ ಹೊಲೆ, ನುಡಿದಂತೆ ನಡೆವುದೇ ಮೋಕ್ಷಕ್ಕೆ ದಾರಿ ಎಂದು ಚೆನ್ನಯ್ಯ ಹೇಳಿರುವುದು ಬಸವಾದಿ ಶರಣರ ಕ್ರಾಂತಿಗೆ ಮೂಲಬೀಜಗಳಾಗಿ ಪರಿಣಮಿಸಿದವು.

**ಢಕ್ಕೆಯ ಬೊಮ್ಮಣ್ಣ:** ಬಸವ ಪೂರ್ವ ಯುಗದ ಶರಣರ ಸಾಲಿನಲ್ಲಿ ಒಬ್ಬನಾಗಿದ್ದು, ಈತನಿಗೆ ಢಕ್ಕೆಯ ಮಾರಯ್ಯನೆಂಬ ಹೆಸರೂ ಇದೆ. ಕಾಲ ಕ್ರಿ.ಶ. 1100. ಢಕ್ಕೆಯನ್ನು ಬಾರಿಸುವ ಕಾಯಕ ಮಾಡುತ್ತಿದ್ದನು. ಮಾರಯ್ಯ ಷಟ್‌ಸ್ಥಲಗಳನ್ನರಿತ ಮಹಾ ಶಿವಶರಣನಾಗಿದ್ದು, ತನ್ನ ಆರಾಧ್ಯ ದೈವ ಮಾರಿಯ ಮೂಲಕವೇ ಇಹಪರಗಳೆರಡನ್ನು ಸಾಧಿಸ ಹೊರಟ ಶ್ರೇಷ್ಠ ಶಿವಭಕ್ತ. ಇದುವರೆಗೂ 89 ವಚನಗಳು ದೊರೆತಿದ್ದು, 'ಕಾಲಾಂತಕ ಭೀಮೇಶ್ವರ ಲಿಂಗ' ಎಂಬ ಅಂಕಿತವನ್ನು ಹೊಂದಿವೆ. ತಲೆಯ ಮೇಲೆ ಮಾರಿಯನ್ನು ಹೊತ್ತು, ಸೊಂಟಕ್ಕೆ ಢಕ್ಕೆಯನ್ನು ಬಿಗಿದು ಆ ಢಕ್ಕೆಯನ್ನು ಬಾರಿಸುತ್ತಾ ಮನೆಯಿಂದ ಮನೆಗೆ ಹೋಗಿ ಶರಣ ಮಾರ್ಗವನ್ನು ಜನತೆಗೆ ಬೋಧಿಸುವನು. ಜನರು ಪ್ರೀತಿಯಿಂದ ಕೊಟ್ಟಿದ್ದನ್ನು ಸಂತೋಷದಿಂದ ಸ್ವೀಕರಿಸಿ ಬಂದುದರಲ್ಲೆ ತನಗೆ ಅಗತ್ಯವಿದ್ದಷ್ಟು ಮಾತ್ರ ತೆಗೆದುಕೊಂಡು ಉಳಿದಿದ್ದರಲ್ಲಿ ದಾಸೋಹ ನಡೆಸುತ್ತಿದ್ದ ಕಾಯಕಯೋಗಿ ಬೊಮ್ಮಣ್ಣ.

"ತನುವೆಂಬಂಗವ ತಾಳಿ ಬಂದಾಗವೆ ಮನವೆಂಬ ಮಾರಿ
ಒಡಲಹೊಕ್ಕಿತ್ತು, ಉಭಯದೊಡಲ ಕೊಂಡು ಬಂದೆ;
ಬಲದ ಕೈಯಲ್ಲಿ ಎಲುಹಿನ ಢಕ್ಕೆ, ಎಡವ ಕೈಯಲ್ಲಿ ಜಗ
ಪೂಜಿಸುವಶಕ್ತಿ
ಎನ್ನ ಮನದ ಕೊನೆಯಲ್ಲಿ ಕಾಲಾಂತಕ ಭೀಮೇಶ್ವರಲಿಂಗ
ವಲ್ಲದಿಲ್ಲಯೆಂಬ ಭಾಷೆ"

ಬೊಮ್ಮಣ್ಣನು ಈ ವಚನದಲ್ಲಿ ತನ್ನ ಸಾಧನಾ ಪಥವನ್ನು ಸ್ಪಷ್ಟ ಪಡಿಸುತ್ತಾನೆ. ತನುವನ್ನೇ ಮೊರವನ್ನಾಗಿ ಮಾಡಿಕೊಂಡು ಮಾಯಾ ಗುಣವೆಂಬ ಮಾರಿಯನ್ನು ಹಿಡಿದು ರಾಜಸ–ತಾಮಸವೆಂಬ ಬಾಳ ಬಟ್ಟಲನ್ನು ಕೈಯಲ್ಲಿಟ್ಟುಕೊಂಡು, ಪ್ರಳಯ ಸಂಹಾರವೆಂಬ ಬಳೆಯನ್ನು ಕೈಯಲ್ಲಿ ತೊಟ್ಟುಕೊಂಡು ಅಂಗದ ಮನೆಯ ಬಾಗಿಲಲ್ಲಿ ಬಂದು ನಿಲ್ಲುವ ಶರಣ. ಬಲ್ಲವರಿಕ್ಕಿ, ಅರಿಯದವರು ಸುಮ್ಮನಿರಿ ಎಂದು ಹೇಳುವ ನಿಷ್ಠಾವಂತ. ಅವನ ದೃಷ್ಟಿಯಲ್ಲಿ 'ಮಾರಿ' ಅಂತಿಂಥವಳಲ್ಲ. 'ಮರೆದವರ ಮನದಲ್ಲಿ ಮಾರಿಯಗುತ್ತಾಳೆ. ಅರಿದವರ ಮನದಲ್ಲಿ ಸ್ವಯಂ ಜ್ಯೋತಿಯಾಗಿ ಮೆರೆಯುತ್ತಾಳೆ' ಎಂದು ಹೇಳಿ ಜನರನ್ನು ಎಚ್ಚರಿಸುವ ಕಾಯಕವನ್ನು ಭಾವಶುದ್ಧವಾಗಿ ಮಾಡಿದರೆ ಅದೇ ನಾವು ದೇವರಿಗೆ ಮಾಡುವ ನಿಜವಾದ ಪೂಜೆ ಎಂದು ಹೇಳಿದನು.

**ವೈದ್ಯ ಸಂಗಣ್ಣ:** ವೈದ್ಯ ವೃತ್ತಿಯನ್ನು ಕಾಯಕವಾಗಿ ಸ್ವೀಕರಿಸಿದ್ದ ಸಂಗಣ್ಣ ಶರಣನಾಗಿಯೂ ಉತ್ತಮ ವಚನಗಳನ್ನು ರಚಿಸಿದ್ದಾನೆ. ಕಾಲ–1160. 'ಮರುಳಶಂಕರ ಪ್ರಿಯ ಸಿದ್ಧರಾಮೇಶ್ವರ' ಅಂಕಿತದಲ್ಲಿ 21 ವಚನಗಳು ದೊರೆತಿವೆ. ಇಲ್ಲಿಯ ಅನೇಕ ವಚನಗಳು ವೈದ್ಯ ವೃತ್ತಿಯ ಪರಿಭಾಷೆಯಲ್ಲಿ ತತ್ವವನ್ನು ಬೋಧಿಸುತ್ತವೆ. ಈತನು ಉಲ್ಲೇಖಿಸುವ ನಾಡಿಗಳ ವಿವರ, ವ್ಯಾಧಿಗಳ ಬಗೆ, ಔಷಧ ಪ್ರಕಾರಗಳು, ವೈದ್ಯಶಾಸ್ತ್ರದ ಪರಿಣತಿ ಮತ್ತು ಆತ ಅವುಗಳಿಗೆ ಜೋಡಿಸುವ ತಾತ್ವಿಕ ಪರಿ ತುಂಬಾ ವಿಶೇಷವಾದುದಾಗಿದೆ. ವೈದ್ಯ ಸಂಗಣ್ಣ ಶರೀರದ ಕಾಯಿಲೆಗಳ ಉಪಶಮನಕ್ಕೆ ಬಹಿರಂಗದ ಚಿಕಿತ್ಸೆಯ ಜೊತೆಗೆ ಅಂತರಂಗದ ಚಿಕಿತ್ಸೆಯೂ ನಡೆಯಬೇಕೆಂಬುದು ಅವರ ವಚನಗಳ ಆಶಯವಾಗಿದ್ದು, ಶಿವಯೋಗ, ಷಟಸ್ಥಲಗಳ ವಿವರಣೆ ಈ ವಚನಗಳಲ್ಲಿ ಕಾಣುವುದು.

"ನಾನಾ ರೋಗಂಗಳು ಬಂದು ದೇಹವ ಹಿಡಿದಲ್ಲಿ
ಶಿವಾರ್ಚನೆಯ ಬೇರ ಕೊಳ್ಳಿ
ಸಕಲ ಪುಷ್ಪಂಗಳಿಂದ ಪೂಜೆಯ ಮಾಡಿಕೊಳ್ಳಿ
ಪಂಚಾಕ್ಷರಿ ಪ್ರಣವವ ತಪ್ಪದೆ ತ್ರಿಸಂಧಿಯಲ್ಲಿ ನೆನಹುಗೊಳ್ಳಿ
ಇವರಿಂದ ರುಜೆ ದರ್ಪಂಗೆಡುಗು
ಮರುಳ ಶಂಕರಪ್ರಿಯ ಸಿದ್ಧರಾಮೇಶ್ವರ ಲಿಂಗ ಸಾಕ್ಷಿಯಾಗಿ"

ನಾನಾ ರೋಗಗಳಿಗೆ ಚಿಕಿತ್ಸೆ ನೀಡುತ್ತಿದ್ದ ಸಂಗಣ್ಣ ಒಬ್ಬ ವಿಶಿಷ್ಟ ಬಗೆಯ ಭವರೋಗ ತಜ್ಞ, ತನುವಿಗೆ ಅಂಟಿಕೊಳ್ಳುವ ರೋಗಗಳನ್ನು ನಾಡಿ ಶಾಸ್ತ್ರದ ಮೂಲಕ ಕಂಡು ಹಿಡಿದು ಔಷಧ ಕೊಡುವ ಮೂಲಕ ದೇಹ ಹಾಗೂ ಮನಸ್ಸುಗಳೆರಡೂ ಒಂದು ಮತ್ತೊಂದರ ಮೇಲೆ ಪರಿಣಾಮ ಬೀರುತ್ತವೆ. ಶಿವನಲ್ಲಿ ಭಕ್ತಿ, ವಿಶ್ವಾಸ, ನಂಬಿಕೆಯಿದ್ದವರಿಗೆ ಶಿವಕಾರುಣ್ಯ ಚಿಕಿತ್ಸೆ ಮಾಡುತ್ತಿದ್ದನು. ಇದ್ಯಾವುದು ಇಲ್ಲದವರಿಗೆ ದೇಹಕ್ಕೆ ಚಿಕಿತ್ಸೆ ನೀಡಿ ಕಾಯಿಲೆಗಳನ್ನು ಗುಣಪಡಿಸುತ್ತಿದ್ದನು. ಬಹಿರಂಗ–ಅಂತರಂಗ ಚಿಕಿತ್ಸೆಗಳು ಮನುಷ್ಯನ ಆಚಾರ–ವಿಚಾರಗಳನ್ನು ಪರಿಶುದ್ಧವಾಗಿಸುತ್ತವೆ ಎನ್ನುತ್ತಾನೆ.

**ಸಮಾರೋಪ:** ಪ್ರಮುಖ ವಚನಕಾರರ ವಚನಗಳನ್ನಷ್ಟೆ ವಿಶ್ಲೇಷಣೆ ಮಾಡುತ್ತಾ ಇನ್ನುಳಿದ ವಚನಕಾರರಾದ ಕಂಬದ ಮಾರಿತಂದೆ, ಕದಿರೆ ರೆಮ್ಮವ್ವೆ, ಕನ್ನಡಿ ಕಾಯಕದ ಅಮ್ಮಿದೇವ, ಕೀಲಾರದ ಭೀಮಣ್ಣ, ನುಲಿಯ ಚಂದಯ್ಯ, ನಗೆಯ ಮಾರಿತಂದೆ, ಮೋಳಿಗೆ ಮಾರಯ್ಯ, ಕಿನ್ನರಿ ಬ್ರಹ್ಮಯ್ಯ, ವೀರಗೊಲ್ಲಾಳ, ಸೂಜೀ ಕಾಯಕದ ರಾಮಿತಂದೆ, ಸುತ್ತಿಗೆ ಕಾಯಕದ ಮಾರಯ್ಯ– ಇಂತಹ ಹಲವಾರು ವಚನಕಾರರು ತಮ್ಮ ವೃತ್ತಿ ಹಾಗೂ ಪ್ರವೃತ್ತಿಗಳನ್ನು ಸಮೀಕರಿಸಿ ವಚನಗಳನ್ನು ಬರೆದಿದ್ದಾರೆ.

"ಮಾಡುವ ಮಾಟದಿಂದಲೆ ಮತ್ತೆಂದನರಿಯಬೇಕು"

ಎಂಬ ಅಲ್ಲಮಪ್ರಭುವಿನ ಉಕ್ತಿಯೊಂದು ಕಾಯಕದಲ್ಲಿ ತೊಡಗಿದ ವಚನಕಾರರ ಪಾಲಿಗೆ ಮಹತ್ವದ ನಿದರ್ಶನವಾಗಿ ತೋರುತ್ತದೆ. ಕಾಯಕವನ್ನು ಕುರಿತ ಬಹುತೇಕ ವಚನಗಳು ಬೆಡಗಿನ ವಚನಗಳಾಗಿವೆ. ವಚನ ಶಾಸ್ತ್ರವೂ, ಸಾಹಿತ್ಯವೂ ಹೌದು. ಅಲ್ಲಿ ಶಾಸ್ತ್ರಕ್ಕೆ ಸಂಬಂಧಿಸಿದ ಅಷ್ಟಾವರಣ, ಷಟ್‌ಸ್ಥಲ, ಪಂಚಾಚಾರಗಳೆಂಬ ವಿಧಿ–ವಿಧಾನಗಳ ಜತೆ ಮನುಷ್ಯ–ಮನುಷ್ಯರಲ್ಲಿ ಮಾನವೀಯತೆ ಅರಳಿಸುವ ಸಮತಾವಾದವನ್ನು ಕಲ್ಪಿಸುವ

ಅಮೂಲ್ಯವಾದ ಅನುಭವಗಳನ್ನೊಳಗೊಂಡ ಚಿಂತನ ಸಾಹಿತ್ಯವಿದೆ. ವಚನಕಾರರು ಕೇವಲ ಒಂದೇ ದೃಷ್ಟಿಯಿಂದ ಸಮಾಜವನ್ನು ನೋಡದೇ, ಸಮಗ್ರ ದೃಷ್ಟಿಯಿಂದ ಎಲ್ಲಾ ಕ್ಷೇತ್ರಗಳಲ್ಲಿಯ ಒಳಿತು–ಕೆಡುಕುಗಳನ್ನು ಗುರುತಿಸಿದವರು. ವಚನಕಾರರ ಅಮೂಲ್ಯ ವಿಚಾರಗಳನ್ನು ಅರ್ಥೈಸಿಕೊಂಡು ಹೊಸದಿಕ್ಕನ್ನು ಕಂಡುಕೊಳ್ಳಬೇಕಾಗಿರುವುದು ನಮ್ಮ ಮುಂದಿನ ದೃಷ್ಟಿಕೋನವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ವಚನಸಿರಿ, ಈರಪ್ಪ ಮಹಾಲಿಂಗಪೂರ
2. ವಚನ ಸಂಶೋಧನ, ವೀರಣ್ಣ ರಾಜೂರ
3. ಶರಣರ ಅನುಭಾವ ಸಾಹಿತ್ಯ, ಎಚ್. ತಿಪ್ಪೇರುದ್ರಸ್ವಾಮಿ
4. ಪ್ರಮುಖ ವಚನಕಾರರು, ಸಿ.ಪಿ.ಕೆ.
5. ವಚನ ಸಾಹಿತ್ಯ, ಎಂ. ಚಿದಾನಂದ ಮೂರ್ತಿ
6. ಶರಣ ಕಥಾ ಮಾಲೆ, ಬಸವ ಸಮಿತಿ, ಬೆಂಗಳೂರು–1